**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.523/2016</u>**

ಸರಕಾರದ ಪರವಾಗಿಃ ಯಡ್ರಾಮಿ ಪೊಲೀಸರು

-:ವಿರುದ್ದ:-

ಆರೋಪಿ/ತರುಃ- ಮಲ್ಲಪ್ಪಾ ತಂದೆ ನಿಂಗಪ್ಪಾ ತಳವಾರ
ವ : 36 ವರ್ಷ, ಉಃ ಚಾಲಕ,
ಸಾಃ ಕಾಚಾಪೂರ, ತಾಃ ಜೇವರ್ಗಿ,

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-

ಪ್ರಃ2: ಪ್ರಾಸಾ-1 ಪಾರ್ವತಿ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಐದು ವರ್ಷಗಳ ಹಿಂದೆ ತಾನು, ತನ್ನ ಅಕ್ಕ ಮತ್ತು ತನ್ನ ಮಗಳು ಕೂಡಿಕೊಂಡು ಹಂಗರಗಿ ಗ್ರಾಮಕ್ಕೆ ಟಂಟಂ ವಾಹನದಲ್ಲಿ ಹೋಗಿ ಕಾರ್ಯಕ್ರಮ ಮುಗಿಸಿಕೊಂಡು ರಾತ್ರಿ 8-30 ಗಂಟೆಗೆ ಊರಿಗೆ ವಾಪ್ಪಸ್ಸು ಬರುತ್ತಿರುವಾಗ ಸೈದಾಪೂರ ಕ್ರಾಸ ಹತ್ತಿರ ಯಡ್ರಾಮಿ ಕೆಡಯಿಂದ ನಮ್ಮ ಎದುರಿನಿಂದ ಒಂದು ಟ್ರ್ಯಾಕ್ಟರ ಜೋರಾಗಿ ಬಂದು ನಮ್ಮ ಟಂಟಂ ವಾಹನಕ್ಕೆ ಡಿಕ್ಕಿಪಡ್ಡಿಸಿತು, ಆದ್ದರಿಂದ ತಾಯಮ್ಮ ಹಾಗೂ ದೊಡ್ಡಮ್ಮನವರಿಗೆ ಗಾಯಗಳಾಗಿದ್ದವು, ದೊಡ್ಡಮ್ಮ ಅವರಿಗೆ ತಲೆಗೆ ಮತ್ತು ಕಾಲುಗಳಿಗೆ ಗಾಯಗಳಾಗಿ ಸ್ಥ,ಳದಲ್ಲಿಯೇ ಮೃತಪಟ್ಟಿರುತ್ತಾರೆ, ಟ್ರ್ಯಾಕ್ಟರ ಚಾಲಕ ಮತ್ತು ಟಂಟಂ ಚಾಲಕ ಸ್ಥ,ಳದಿಂದ ಓಡಿ ಹೋದರು, ನಂತರ ತಾಯಮ್ಮ ಅವರಿಗೆ ಕಲಬುರ್ಗಿ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದ್ದು ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿ ಅಪಘಾತವು

ಎರಡು ವಾಹನಗಳ ಚಾಲಕರ ತಪ್ಪಿನಿಂದಾಗಿರುತ್ತದೆ, ಎರಡು ವಾಹನಗಳು ತುಂಬ ವೇಗವಾಗಿ ಚಲಿಸುತ್ತಿದ್ದವು, ಅದೇ ದಿನ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ, ಸಾಕ್ಷಿಯು ಮುಂದುವರೆದೆ ಹೇಳುವುದೇನೆಂದರೆ, ದೂರು ನೀಡಿದ ಮಾರನೆ ದಿನ 10-00 ಗಂಟೆ ಸಮಯದಲ್ಲಿ ಪೊಲೀಸರು ಬಂದು ಪಂಚನಾಮೆ ಜರುಗಿಸಿರುತ್ತಾರೆ, ಘಟನಾ ಸ್ಥ,ಳವನ್ನು ತಾನು ಪೊಲೀಸರಿಗೆ ತೋರಿಸಿರುತ್ತೇನೆ, ನಂತರ ತಾಯಮ್ಮ ಮತ್ತು ದೊಡ್ಡಮ್ಮಅವರು ಮೃತಪಟ್ಟ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ, ನಂತರ ಟ್ರ್ಯಾಕ್ಟರ ಚಾಲಕ ಮಹಾದೇವಗೌಡ ಅವರನ್ನು ನೋಡಿ ಗುರುತಿಸಿ ಹೇಳಿಕೆ ನೀಡಿರುತ್ತೇನೆ, ಸದರಿ ಅಪಘಾತವು ಮಹಾದೇವಗೌಡ ಮತ್ತು ಮಲ್ಕಪ್ಪ ಅವರ ತಪ್ಪಿನಿಂದ ಆಗಿರುತ್ತದೆ, ಇಬ್ಬರೂ ಚಾಲಕರೂ ವಾಹನಗಳನ್ನು ವೇಗವಾಗಿ ಓಡಿಸುತ್ತಿದ್ದರು ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ3: ಪ್ರಾಸಾ-2 ಪರಶುರಾಮ ಇವರು ತಮ್ಮ ಸಾಕ್ಷಿಯಲ್ಲಿ ಏನು ಹೇಳುತ್ತಾರೆಂದರೆ, ಚಾಸಾ-1, 3 ನನಗೆ ಗೊತ್ತು. ಮೃತ ತಾಯಮ್ಮ ಮತ್ತು ದೊಡ್ಡಮ್ಮ ನನಗೆ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು 8-ವರ್ಷಗಳ ಹಿಂದೆ ಯಡ್ರಾಮಿ ಸರಕಾರಿ ಆಸ್ಪತ್ರೆಯಲ್ಲಿ ಠಾಣೆಯಲ್ಲಿ ಮಾಡಿರುತ್ತೇನೆ. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಘಟನಾ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ4: ಪ್ರಾಸಾ-3 ಅಶೋಕ ಇವರು ತಮ್ಮ ಸಾಕ್ಷಿಯಲ್ಲಿ ಏನು ಹೇಳುತ್ತಾರೆಂದರೆ, ಚಾಸಾ-1, 3 ನನಗೆ ಗೊತ್ತು. ಮೃತ ತಾಯಮ್ಮ ಮತ್ತು ದೊಡ್ಡಮ್ಮ ನನಗೆ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು 8-ವರ್ಷಗಳ ಹಿಂದೆ ಯಡ್ರಾಮಿ ಸರಕಾರಿ ಆಸ್ಪತ್ರೆಯಲ್ಲಿ ಠಾಣೆಯಲ್ಲಿ ಮಾಡಿರುತ್ತೇನೆ. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಘಟನಾ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ:5 ಪ್ರಾಸಾ-4 ಸಿದ್ದಮ್ಮ ಚಾಸಾ-1 ನನ್ನ ತಂಗಿ. ಚಾಸಾ-8, 9 ಮತ್ತು 11 ರವರ ನನಗೆ ಪರಿಚಯ ಇರುತ್ತದೆ. ಚಾಸಾ-11 ನನ್ನ ಮಗ. ಆರೋಪಿಯು ನನಗೆ ಗೊತ್ತು. ಮೃತ ತಾಯಮ್ಮ ನನ್ನ ನೇಗೆಣಿ, ದೊಡ್ಡಮ್ಮ ನನ್ನ ನೇಗೆಣಿಯ ಮಗಳು. ಈಗ ಸುಮಾರು 8 ವರ್ಷಗಳ ಹಿಂದೆ ನಾನು ಮೃತ ತಾಯಮ್ಮ ಮತ್ತು ದೊಡ್ಡಮ್ಮ. ಚಾಸಾ-1 ರವರು ಕೂಡಿಕೊಂಡು ಆರೋಪಿತನು ನಡೆಸುತ್ತಿದ್ದ ಟಂ ಟಂನಲ್ಲಿ ಹಂಗರಗಾ ಬಿ ಗ್ರಾಮಕ್ಕೆ ಹೋಗಿರುತ್ತೇವೆ. ನಂತರ ನಾವು ಕಾರ್ಯಕ್ರಮವನ್ನು ಮುಗಿಸಿಕೊಂಡು ಕಾಚಾಪೂರಕ್ಕೆ ರಾತ್ರಿ 08.40 ಗಂಟೆ ಸುಮಾರಿಗೆ ಆರೋಪಿತನು ನಡೆಸುತ್ತಿರುವ ಟಂಟಂನಲ್ಲಿ ಕುಳಿತುಕೊಂಡು ಬರುತ್ತಿದ್ದಾಗ ಆರೋಪಿತನು ಟಂಟಂನ್ನು ಅತಿ ವೇಗವಾಗಿ ನಡೆಸಿಕೊಂಡು ಬಂದು ಸೈದಾಪೂರ ಕ್ರಾಸ ಹತ್ತಿರ ಎದುರಿಗೆ ಬಂದ ಟ್ರಾಕ್ಟರಿನ ಟ್ರೇಲರ ಟಂಟಂಗೆ ಬಡಿದು ದೊಡ್ಡಮ್ಮಗೆ ತಲೆಯ ಭಾಗಕ್ಕೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ತಾಯಮ್ಮಳಿಗೆ ಎಡಗಾಲಿಗೆ ಮತ್ತು ಎಡಗೈಗೆ ಭಾರಿ

ರಕ್ತಗಾಯವಾಗಿ ನಂತರ ಚಿಕಿತ್ಸೆಗಾಗಿ ಯಡ್ರಾಮಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದಾಗ ಮೃತಪಟ್ಟಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು. ಆರೋಪಿಯ ಹೆಸರು ಮಲ್ಕಪ್ಪ ಎಂದು ಹೇಳಿರುತ್ತಾರೆ. ಸದರಿ ಅಪಘಾತವು ಆರೋಪಿ ಮಲ್ಕಪ್ಪ ತಪ್ಪಿನಿಂದ ಆಗಿರುತ್ತದೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ:6 ಪ್ರಾಸಾ-5 ತಯಬ ಅಲಿ ಇವರು ತಮ್ಮ ಸಾಕ್ಷಿಯಲ್ಲಿ ಏನು ಹೇಳುತ್ತಾರೆಂದರೆ, ಚಾಸಾ-6 ನನಗೆ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು 8-ವರ್ಷಗಳ ಹಿಂದೆ ಆಲೂರಿನಲ್ಲಿ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ:7 ಪ್ರಾಸಾ-7 ಉದಯಕುಮಾರ ಇವರು ತಮ್ಮ ಸಾಕ್ಷಿಯಲ್ಲಿ ಏನು ಹೇಳುತ್ತಾರೆಂದರೆ, ಚಾಸಾ-5 ನನಗೆ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಗಳನ್ನು 10-ವರ್ಷಗಳ ಹಿಂದೆ ಯಡ್ರಾಮಿ ಬಸ್ ನಿಲ್ದಾಣದಲ್ಲಿ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ:8 ಪ್ರಾಸಾ-8 ಅಮರೇಶ ಇವರು ತಮ್ಮ ಸಾಕ್ಷಿಯಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 26-06-2016 ರಂದು ತಾನು ಕಾಚಾಪೂರದಲ್ಲಿದ್ದಾಗ ಚಾಸಾ-7 ಅವರು ತನಗೆ ಫೋನ ಮಾಡಿ ಸೈದಾಪೂರ ಕ್ರಾಸ ಹತ್ತಿರ ಟ್ರ್ಯಾಕ್ಟರ ಮತ್ತು ಟಂಟಂ ನಡುವೆ ಅಪಘಾತವಾಗಿರುತ್ತದೆ ಎಂದು ತಿಳಿರುತ್ತಾರೆ, ನಂತರ ತಾನು ಯಡ್ರಾಮಿ ಸರಕಾರಿ ಆಸ್ಪತ್ರೆಗೆ ಹೋದಾಗ ದೊಡ್ಡಮ್ಮಳ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಳು, ನಂತರ ತಾಯಮ್ಮಗೆ ಎಡಗಾಲಿಗೆ ಮತ್ತು ಎಡಗೈಗೆ ಭಾರಿ ರಕ್ತಗಾಯವಾಗಿ ಮಾಂಸ ಹೊರಗೆ ಬಂದಿತ್ತು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರ್ಗಿಯ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಕಲಬುರ್ಗಿ ಸಮೀದ ಮಾರ್ಗ ಮದ್ಯ ಮೃತಪಟ್ಟಿರುತ್ತಾರೆ, ಸದರಿ ಅಪಘಾತವು ಎರಡು ವಾಹನಗಳ ಚಾಲಕರ ತಪ್ಪಿನಿಂದಾಗಿರುತ್ತದೆ ಎಂದು ತನಗೆ ಚಾಸಾ-7 ಅವರು ತಿಳಿಸಿರುತ್ತಾರೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ9: ಪ್ರಾಸಾ-9 ಮೇಲನಗೌಡ, ನಿವೃತ್ತ ಎ ಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 24-06-2016 ರಂದು ಚಾಸಾ-21 ಅವರ ಮೌಖೀಕ ಆದೇಶದ ಮೆರೆಗೆ ತಾನು ಚಾಸಾ-18 ಅವರ ಜೊತೆ ಕಲಬುರ್ಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಾಸಾ-11 ಅವರ ಹೇಳಿಕೆ ಪಡೆದಿರುತ್ತೇನೆ, ನಂತರ ಚಾಸಾ-2 ರಿಂದ 4 ಅವರ ಸಮಕ್ಷಮ ಮೃತ ತಾಯಮ್ಮ ಗಂಡ ಮಹಾಂತಪ್ಪ ಅವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ, ನಂತರ ಚಾಸಾ-18 ಅವರಿಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ, ಆ ಬಗ್ಗೆ ಚಾಸಾ-21 ಅವರಿಗೆ

ವರದಿ ನೀಡಿರುತ್ತೇನೆ, ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-21 ಅವರಿಗೆ ವಹಿಸಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ10: ಪ್ರಾಸಾ-10 ಹುಸೇನ, ನಿವೃತ್ತ ಪಿ ಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 04-08-2016 ರಂದು ಚಾಸಾ-21 ಅವರಿಂದ ಕಡತವನ್ನು ಪಡೆದಿರುತ್ತೇನೆ, ದಿನಾಂಕ 26-08-2016 ರಂದು ಚಾಸಾ-13 ಅವರಿಂದ ತಾಯಮ್ಮ ಅವರ ಮರಣೋತ್ತರ ವರದಿಯನ್ನು ಪಡೆದಿರುತ್ತೇನೆ, ಸದರಿ ಪ್ರಕರಣದಲ್ಲಿ ಫಿರ್ಯಾದಿ, ಪ್ರಥಮ ವರ್ತಮಾನ ವರದಿ, ಚಾಸಾ-1 ಅವರ ಹೇಳಿಕೆಮತ್ತು ಎರಡು ಪುರವಣಿ ಹೇಳಿಕೆ, ಮೃತ ತಾಯಮ್ಮ ಮತ್ತು ದೊಡ್ಡಮ್ಮರವರ ಶವ ಪಂಚನಾಮೆಗಳು, ಗುನ್ನಾ ಜಾಗದ ಪಂಚನಾಮೆ, ಎರಡು ಜಪ್ತಿ ಪಂಚನಾಮೆಗಳು, ಚಾಸಾ-7 ರಿಂದ ಚಾಸಾ-12 ಅವರ ಹೇಳಿಕೆಗಳನ್ನು ಚಾಸಾ-7 ರಿಂದ ಚಾಸಾ-9 ಅವರ ಪುನರ ಹೇಳಿಕೆಗಳು, ಚಾಸಾ-19 ಅವರ ವರದಿ, ಚಾಸಾ-16 ಅವರ ಹೇಳಿಕೆ, ದೊಡ್ಡಮರವರ ಪಿ ಎಂ ಇ ಮತ್ತು ಐ ಎಂ ವಿ ವರದಿಗಳು ಹಾಗೂ ಅಪಘಾತಕ್ಕಿಡಾದ ವಾಹನಗಳ ಫೋಟೋಗಳನುನ ಪರಿಶೀಲಿಸಿ ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ದ ದೋಷಾರೊಪಣೆ ಪತ್ರವನಲುನ ಸಲ್ಲಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ11: ಪ್ರಾಸಾ-11 ಜಾಕೀರ ಇನಾಮದಾರ, ಡಿವೈಎಸ್‌ಪಿ ಲೋಕಾಯುಕ್ತ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 24-06-2016 ರಂದು

ಸದರಿ ಪ್ರಕರಣದ ಕಡತವನ್ನು ಚಾಸಾ-20 ಅವರಿಂದ ಪಡೆದುಕೊಂಡು ಅದೇ ದಿನ ಗುನ್ನಾ ಜಾಗೆಗೆ ಭೆಟ್ಟಿ ನೀಡಿ ಚಾಸಾ-2 ಮತ್ತು 3 ಅವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ, ಅದೇ ದಿನ ಯಡ್ರಾಮಿ ಠಾಣೆಗೆ ಭೆಟ್ಟಿ ನೀಡಿಚಾಸಾ-16 ಅವರು ಹಾಜರಪಡಿಸಿದ ಟ್ರ್ಯಾಕ್ಟರ ಚೆಸ್ಸಿ ನಂ.WXCF40606099778, trolly No.SVJA11006 ನ್ನು ಜಪ್ತಿಪಡಿಸಿಕೊಂಡಿರುತ್ತೇನೆ, ಅದೇ ಯಡ್ರಾಮಿ ಆಸ್ಪತ್ರೆಗೆ ಭೆಟ್ಟಿ ನೀಡಿ ಚಾಸಾ-1 ಅವರು ತೋರಿಸಿದ ಟಂಟಂ ನಂ.ಕೆಎ-32/ಸಿ-3654 ನ್ನು ಚಾಸಾ-5 ಮತ್ತು ಚಾಸಾ-6 ಅವರ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತೇನೆ, ಸದರಿ ಅಪಘಾತವು ಟಂಟಂ ಹಾಗೂ ಟ್ರ್ಯಾಕ್ಟರ ಚಾಲಕರ ತಪ್ಪಿನಿಂದಾಗಿರುತ್ತದೆ ಎಂದು ಚಾಸಾ-1 ಅವರು ಪುರವಣಿ ಹೇಳಿಕೆ ಪಡೆದಿರುತ್ತೇನೆ, ಅದೇ ದಿನ ಚಾಸಾ-7 ರಿಂದ ಚಾಸಾ-10 ಅವರ ಹೇಳಿಕೆ ಪಡೆದಿರುತ್ತೇನೆ, ಅದೇ ದಿನ ಚಾಸಾ-19 ಅವರಿಂದ ಮೃತ ತಾಯಮ್ಮ ಶವ ಪಂಚನಾಮೆ ವರದಿ ಪಡೆದಿರುತ್ತೇನೆ, ಅದೇ ಚಾಸಾ-20 ಅವರನ್ನು ಆರೋಪಿತರ ಪತ್ತೆ ಮಾಡಿ ದಸ್ತಗಿರಿ ಮಾಡುವಂತೆ ಆದೇಶ ಮಾಡಿರುತ್ತೇನೆ, ದಿನಾಂಕ 13-07-2016 ರಂದು ಅಪಘಾತಕ್ಕಿಡಾದ ವಾನಗಳ IMV ವರದಿಗಾಗಿ ಚಾಸಾ-15 ಅವರಿಗೆ ಪತ್ರ ಬರೆದಿರುತ್ತೇನೆ, ಚಾಸಾ-13 ಅವರಿಂದ ಮೃತ ದೊಡ್ಡಮ್ಮರವರ ಪಿಎಂ ಇ ವರದಿಯನ್ನು ಪಡೆದಿರುತ್ತೇನೆ, ದಿನಾಂಕ 16-07-2016 ರಂದು ಟ್ರ್ಯಾಕ್ಟರ ಚಾಲಕ ಆರೋಪಿಯನ್ನು ಠಾಣೆಗೆ ಹಾಜರಾಗಿದ್ದರಿಂದ, ಚಾಸಾ-1, 7 ರಿಂದ 9 ಆರೋಪಿತನ ಗುರುತಿಸುವಿಕೆ ಬಗ್ಗೆ ಪುನರ ಹೇಳಿಕೆ ಪಡೆದಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಚಾಲಕನನ್ನು ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಮತ್ತು ಟ್ರಾಲಿಯನ್ನು ಸೂಕ್ತ ಬಾಂಡ ಪಡೆದು ಚಾಸಾ-12 ಅವರಿಗೆ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಚಾಲಕನನ್ನು ಬಿಡುಗಡೆ ಮಾಡಿರುತ್ತೇನೆ, ದಿನಾಂಕ 22-07-2016 ರಂದು ಇನೊಬ್ಬ ಆರೋಪಿ ಮಲಕಪ್ಪ ತಳವಾರ ಇತನು ಠಾಣೆಗೆ ಹಾಜರಾಗಿದ್ದರಿಂದ

ಆತನನ್ನು ದಸ್ತಗಿರಿ ನಿಯಮ ಪಾಲಿಸಿ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟಂಟಂನ್ನು ಸೂಕ್ತ ಬಾಂಡ ಪಡೆದುಕೂಂಡು ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಎರಡು ವಾಹನಗಳ ಐ ಎಂ ವಿ ವರದಿಯನ್ನು ಚಾಸಾ-15 ಅವರಿಂದ ಪಡೆದುಕೊಂಡಿರುತ್ತೇನೆ, ದಿನಾಂಕ 04-08-2016 ರಂದು ಪ್ರಕರಣದ ಕಡತವನ್ನು ಚಾಸಾ-22 ಅವರಿಗೆ ವಹಿಸಿರುತ್ತೇನೆ, ಈ ಪ್ರಕರಣದ ಎಲ್ಲಾ ದಾಖಲೆಗಳ ಧೃಢಿಕೃತ ಪ್ರತಿಗಳನ್ನು ಪ್ರಕರಣದಲ್ಲಿ ಹಾಜರ ಪಡಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ12: ಪ್ರಾಸಾ-12 ಆನಂದರಾವ, ಪಿ ಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 23-06-2016 ರಂದು ರಾತ್ರಿ 10-00 ರ ಸಮಯದಲ್ಲಿ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ನಂತರ ಯಡ್ರಾಮಿ ಸರಕಾರಿ ಆಸ್ಪತ್ರೆಗೆ ಭೆಟಿ ನೀಡಿ ಚಾಸಾ-2 ಮತ್ತು ಚಾಸಾ-3 ಅವರ ಸಮಕ್ಷಮ ಮೃತ ದೊಡ್ಡಮಳ ಶವ ಪಂಚನಮೆಯನ್ನು ಜರುಗಿಸಿರುತ್ತೇನೆ, ದಿನಾಂಕ 24-06-2016 ರಂದು ಪ್ರಕರಣದ ಕಡತವನ್ನು ಚಾಸಾ-21 ಅವರಿಗೆ ವಹಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ 13 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-

ಪ್ರ-14 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ ಆ-

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 07-02-2026 ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,

ಜೇವರ್ಗಿ.